# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 001.

ದೂರವಾಣಿ : 080–2226 5383 ಫ್ಯಾಕ್ಸ್ : 080–2226 7901

ವೆಬ್‌ಸೈಟ್ : www.kiadb.in ಇ–ಮೇಲ್ : ceoemkiadb@gmail.com


ಸಂಖ್ಯೆ: ಕಕೈಪ್ರಮಂ/ಕೇಂ.ಕ/ಆಡಳಿತ–1255(4)/4264/2023–24 ದಿನಾಂಕ: 03.06.2024

:: **ಅಧಿಕೃತ ಜ್ಞಾಪನ** ::

ವಿಷಯ : ದಿನಾಂಕ: 01.01.2024 ರಲ್ಲಿದ್ದಂತೆ ಕೆ.ಐ.ಎ.ಡಿ.ಬಿ.ಯ ಎಲ್ಲಾ ವೃಂದಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ : ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಣೆ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಕಕೈಪ್ರಮಂ/ಕೇಂ.ಕ/ಆಡಳಿತ–1255(5)/19867/2023–24, ದಿನಾಂಕ: 16.02.2024

***

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ದಿನಾಂಕ: 01.01.2024 ರಲ್ಲಿದ್ದಂತೆ ಮಂಡಳಿಯ ಎಲ್ಲಾ ವೃಂದಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖಿತ ಪತ್ರದನ್ವಯ ಪ್ರಕಟಿಸಿರುತ್ತದೆ. ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ, ನಿಗದಿತ ಅವಧಿಯೊಳಗಾಗಿ ಸ್ವಿಕೃತವಾಗಿರುವ ಆಕ್ಷೇಪಣೆಗಳನ್ನು ಈ ಕೆಳಕಂಡಂತೆ ಪರಿಶೀಲಿಸಲಾಗಿದೆ:

1. **ಶ್ರೀಮತಿ ಸೀಮಾ ಜೋಷಿ, ಅಧೀಕ್ಷಕರು, ಕೆ.ಐ.ಎ.ಡಿ.ಬಿ. ಕೇಂದ್ರ ಕಛೇರಿ, ಇವರ ಆಕ್ಷೇಪಣೆ:**

ಶ್ರೀಮತಿ ಸೀಮಾ ಜೋಷಿ, ಅಧೀಕ್ಷಕರು, ಇವರು ದಿನಾಂಕ: 06.03.2024 ರಂದು ಸಲ್ಲಿಸಿದ ಲಿಖಿತ ಆಕ್ಷೇಪಣೆಯಲ್ಲಿ ಮಂಡಳಿಯು ದಿನಾಂಕ: 16.02.2024 ರಂದು ಪ್ರಕಟಿಸಲಾದ ಅಧೀಕ್ಷಕ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಶ್ರೀಮತಿ ಸುನೀತಾ ವೇಣುಗೋಪಾಲ್ ಇವರ ಹೆಸರನ್ನು ತಮಗಿಂತ ಮೇಲಿನ ಸ್ಥಾನದಲ್ಲಿ ತೋರಿಸಲಾಗಿದ್ದು, ತಾವು ಮಂಡಳಿಯಲ್ಲಿಶೀಘ್ರಲಿಪಿಗಾರರ ಹುದ್ದೆಗೆ ದಿನಾಂಕ: 12.12.1996 ರಂದು ನೇಮಕಾತಿ ಹೊಂದಿದ್ದು, ಶ್ರೀಮತಿ ಸುನೀತಾ ವೇಣುಗೋಪಾಲ್ ಇವರು ದಿನಾಂಕ: 18.06.1998 ರಂದುಶೀಘ್ರಲಿಪಿಗಾರರ ಹುದ್ದೆಗೆ ನೇಮಕಾತಿ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿಶ್ರೀಮತಿ ಸುನೀತಾ ವೇಣುಗೋಪಾಲ್ ಇವರು ತಮಗಿಂತ ಸೇವಾ ಹಿರಿತನದಲ್ಲಿ ಕಿರಿಯರಾಗಿರುತ್ತಾರೆ ಎಂದು ತಿಳಿಸಿ, ತಮ್ಮ ಜೇಷ್ಠತೆಯನ್ನು ಶ್ರೀಮತಿ ಸುನೀತಾ ವೇಣುಗೋಪಾಲ್ ಇವರಿಗಿಂತ ಮೇಲಿನ ಕ್ರಮಾಂಕದಲ್ಲಿ ನಿಗದಿಪಡಿಸಿ, ಅಂತಿಮ ಜೇಷ್ಠತಾ ಪಟ್ಟಿ ಹೊರಡಿಸುವಂತೆ ಕೋರಿರುತ್ತಾರೆ.

**ಮಂಡಳಿಯ ಸಮಜಾಯಿಷಿ:**

ಈ ಕುರಿತು ಪರಿಶೀಲಿಸಲಾಗಿದ್ದು, ದಿನಾಂಕ: 11.06.2019 ರಲ್ಲಿದ್ದಂತೆ ಪ್ರಕಟಿಸಲಾದ ಹಿರಿಯ ಸಹಾಯಕ ವೃಂದದ ಅಂತಿಮ ಜೇಷ್ಠತಾ ಪಟ್ಟಿ, ದಿನಾಂಕ: 17.08.2019 ರಂದು ಸರ್ಕಾರವು ಹಿರಿಯ ಸಹಾಯಕ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ ಪದೋನ್ನತಿ ನೀಡಿ, ಹೊರಡಿಸಲಾದ ಅಧಿಸೂಚನೆ ಮತ್ತುದಿನಾಂಕ: 01.01.2020 ರಲ್ಲಿದ್ದಂತೆ ಹೊರಡಿಸಲಾದ ಅಧೀಕ್ಷಕ ವೃಂದದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಶ್ರೀಮತಿ ಸುನೀತಾ ವೇಣುಗೋಪಾಲ್, ಅಧೀಕ್ಷಕರು, ಇವರ ಹೆಸರು ಶ್ರೀಮತಿ ಸೀಮಾ ಜೋಷಿ ಇವರ ಹೆಸರಿಗಿಂತ ಮೇಲಿನ ಸ್ಥಾನದಲ್ಲಿರುತ್ತದೆ.

....2

ನಂತರ, ದಿನಾಂಕ: 01.01.2023 ರಲ್ಲಿದ್ದಂತೆ ಹೊರಡಿಸಲಾದ ಅಧೀಕ್ಷಕ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಶ್ರೀಮತಿ ಸೀಮಾ ಜೋಷಿ ಇವರ ಹೆಸರು ಶ್ರೀಮತಿ ಸುನೀತಾ ವೇಣುಗೋಪಾಲ್ ಇವರ ಹೆಸರಿಗಿಂತ ಮೇಲಿನ ಕ್ರಮಾಂಕದಲ್ಲಿರುತ್ತದೆ. ಆದರೆ, ಈ ಬದಲಾವಣೆಗೆ ಸಕಾರಣಗಳು ನಮೂದಾಗಿರುವುದಿಲ್ಲ ಮತ್ತು ಈ ಬದಲಾವಣೆಯು ಬೆರಳಚ್ಚು ತಪ್ಪಿನಿಂದಾಗಿ ಮುದ್ರಿತವಾಗಿರುವುದು ಕಂಡುಬರುತ್ತದೆ. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ಶ್ರೀಮತಿ ಸುನೀತಾ ವೇಣುಗೋಪಾಲ್ ಇವರು ದಿನಾಂಕ: 18.01.2023 ರಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ. ನಂತರದಲ್ಲಿ ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯು ಅಂತಿಮಗೊಂಡಿರುವುದಿಲ್ಲ.

ಈ ಹಿಂದೆ ದಿನಾಂಕ: 01.01.2022 ರಲ್ಲಿದ್ದಂತೆ ಹೊರಡಿಸಲಾದ ಜೇಷ್ಠತಾ ಪಟ್ಟಿಯು ಅಂತಿಮಗೊಂಡಿದ್ದು, ಸದರಿ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಶ್ರೀಮತಿ ಸುನೀತಾ ವೇಣುಗೋಪಾಲ್ ಇವರ ಹೆಸರು ಶ್ರೀಮತಿ ಸೀಮಾ ಜೋಷಿ ಇವರ ಹೆಸರಿಗಿಂತ ಮೇಲಿನ ಕ್ರಮಾಂಕದಲ್ಲಿರುತ್ತದೆ. ಅದರಂತೆ ದಿನಾಂಕ: 01.01.2024 ರಲ್ಲಿದ್ದಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿರುತ್ತದೆ.

ಸಕ್ಷಮ ಪ್ರಾಧಿಕಾರಗಳು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಅವಧಿಯಲ್ಲಿ ಈಗಾಗಲೇ ಒಂದು ಬಾರಿ ಅಂತಿಮಗೊಂಡಿರುವ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತೆಯನ್ನು ಪುನಃ ಪರಿಷ್ಕರಿಸಲು ಅವಕಾಶವಿಲ್ಲವಾದ್ದರಿಂದ ಶ್ರೀಮತಿ ಸೀಮಾ ಜೋಷಿ, ಅಧೀಕ್ಷಕರು ಇವರು ಸಲ್ಲಿಸಲಾದ ಮನವಿಯನ್ನು ತಿರಸ್ಕರಿಸಲಾಗಿದೆ.

2. **<u>ಶ್ರೀಮತಿ ಎಸ್.ಎಸ್. ಗೀತಾ, ಅಧೀಕ್ಷಕರು, ಕೆ.ಐ.ಎ.ಡಿ.ಬಿ. ಕೇಂದ್ರ ಕಛೇರಿ, ಇವರ ಆಕ್ಷೇಪಣೆ:</u>**

ಶ್ರೀಮತಿ ಎಸ್.ಎಸ್. ಗೀತಾ, ಅಧೀಕ್ಷಕರು, ಇವರು ದಿನಾಂಕ: 26.02.2024 ರಂದು ಸಲ್ಲಿಸಿದ ಆಕ್ಷೇಪಣೆಯಲ್ಲಿ ತಾವು ನೇಮಕಾತಿ ಹೊಂದಿದ ದಿನಾಂಕದ ನಂತರದಲ್ಲಿ 16 ವರ್ಷಗಳ ತರುವಾಯ ಒಂದು ಪದೋನ್ನತಿಯನ್ನು ನೀಡಿದ್ದು, ತಾವು ಈ ಹಿಂದೆ ದಿನಾಂಕ: 14.03.2011 ರಂದುಪದೋನ್ನತಿಗೆ ಅರ್ಹರಾಗಿದ್ದರೂ ಸಹ ತಮಗೆ ಪದೋನ್ನತಿ ನೀಡಿರುವುದಿಲ್ಲ. ಆದುದರಿಂದ ಜೇಷ್ಠತೆಯಲ್ಲಿ ತಮಗೆ ಅನ್ಯಾಯವಾಗಿರುವುದಾಗಿ ತಿಳಿಸಿ, ನ್ಯಾಯ ಒದಗಿಸುವಂತೆ ಕೋರಿ ಸಲ್ಲಿಸಲಾದ ಆಕ್ಷೇಪಣೆ.

**<u>ಮಂಡಳಿಯ ಸಮಜಾಯಿಷಿ:</u>**

ಈ ಸಂಬಂಧದಿನಾಂಕ: 17.02.2011 ರಂದು ಮಂಡಳಿಯಲ್ಲಿ ಖಾಲಿ ಇದ್ದ ಸಹಾಯಕ ವೃಂದದ ಹುದ್ದೆಗಳನ್ನು ಅರ್ಹ ಕಿರಿಯ ಸಹಾಯಕ / ಮೀಟರ್ ರೀಡರ್ ವೃಂದದಿಂದ ಪದೋನ್ನತಿ ಮೂಲಕ ಭರ್ತಿ ಮಾಡುವ ಕುರಿತು ನಡೆಸಲಾದ ಇಲಾಖಾ ಪದೋನ್ನತಿ ಸಭೆಯ ನಡವಳಿಯನ್ನು ಪರಿಶೀಲಿಸಲಾಯಿತು.

ಸದರಿ ಇಲಾಖಾ ಪದೋನ್ನತಿ ಸಮಿತಿ ಸಭೆಯ ಅವಧಿಯಲ್ಲಿ ಸಹಾಯಕ ವೃಂದದಲ್ಲಿ 36 ಹುದ್ದೆಗಳು ಖಾಲಿ ಇರುತ್ತವೆ. ಈ ಪೈಕಿ ಶೇಕಡಾ 50 ರಷ್ಟು ಅಂದರೆ 18 ಹುದ್ದೆಗಳನ್ನು ನೇರನೇಮಕಾತಿಯಿಂದ, ಶೇಕಡಾ 25 ರಷ್ಟು ಅಂದರೆ 09 ಹುದ್ದೆಗಳನ್ನು ಪದವೀಧರ ಕಿರಿಯ